"SATYAVADI" Founded 1917 Regd. No. M. 1299

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 29 ಸಂಚಿಕೆ 24 | ಶುಕ್ರವಾರ 12—10—45 | ಬಿಡಿ ಪ್ರತಿ 3 ಪೈ

ಪ್ರಜಾಪ್ರತಿನಿಧಿ ಸಭೆ

(ನಮ್ಮ ಖಾಸಗಿ ಪ್ರತಿನಿಧಿಯಿಂದ)

ಮೈಸೂರು, ಅ 12

ಮೂರನೆಯ ದಿವಸದ ಪ್ರತಿನಿಧಿ ಸಭೆ ಯು ಕಾರ್ಯಕ್ರಮಗಳು ಈ ದಿನಸ 12 ಘಂಟೆಗೆ ಪ್ರಾರಂಭವಾದವು. ಪ್ರಧಾನ ಶಿರೋವಣಿ ನ್ಯಾಮತಿ ವಾಧವರಾಯರ ಗೈರ ಹಾಜರಿಯಲ್ಲಿ ಮಿ॥ ಓಬಳವಾಡಿ ಪುಲ್ಲಾರೆಡ್ಡಿಯವರು ಅಧ್ಯಕ್ಷತೆ ವಹಿಸಿದ್ದರು. ಪ್ರಶ್ನೋತ್ತರಗಳಿಂದ ಸಭೆ ಕಾರ್ಯಾರಂಭವನ್ನು ಮಾಡಿತು.

ಇಂಜಿನಿಯರಿಂಗ್ ಶಾಖೆಗೆ ಸಂಬಂಧಿಸಿದ ನೌಕರಿ ವಿಷಯಗಳ ಮೇಲೆ ಪ್ರಶ್ನೋತ್ತರಗಳು ಪ್ರಾರಂಭವಾದವು ಶ್ರೀ ಕೆ. ಡಿ ಜೋಷಿಯವರು ಉತ್ತರವಿತ್ತರು.

ಪಾವುಗಡರವರ ಸವಾಲ್

'ನೌಕರಿ ಕೊಡುವಾಗ ಗಂಧಾಕ್ಷತೆ ಲಿಂಗ ಇತ್ಯಾದಿಗಳನ್ನು ಪರೀಕ್ಷಿಸಿ ಕೊಡಲಾಗುವುದೇ?' ಎಂಬುದಾಗಿ ಶ್ರೀ ಪಾವುಗಡ ನಂಜುಂಡರಾಯರು ಸರ್ಕಾರಕ್ಕೆ ಸವಾಲ್ ಹಾಕಿದರು

ಕ್ರಿಯಾಲೋಪಗಳ ಉದ್ಭವ

'ಕೋಮುವಾರುಗಳ ಮೇಲೆ ಮಾತನಾಡಕೂಡದು, ಸ್ವಾಮಿ ಎಂದು ಕೆಲವು ಸದಸ್ಯರುಗಳು ಕ್ರಿಯಾಲೋಪವನ್ನು ಉದ್ಭವ ಮಾಡಿದರು.

ಅಧ್ಯಕ್ಷರವರಿಗೆ ದೂರು

'ಸ್ವಾಮಿ, ಬೇರೆ ವಿಷಯ ಸಂಬಂಧಿಸಿದ್ದಲ್ಲ ಎಂಬುದಾಗಿ ಕಾರ್ಯದರ್ಶಿಗಳವರು ಕೆಲವು ಪ್ರಶ್ನೆಗಳಿಗೆ ಉತ್ತರ ಕೊಡುತ್ತಾರೆ. ಮಂತ್ರಿವರ್ಯರುಗಳೇ ಉತ್ತರವನ್ನು ದಯಮಾಡಿಸಬೇಕು' ಎಂಬುದಾಗಿ ಕೆಲವು ಸದಸ್ಯರುಗಳು ಅಧ್ಯಕ್ಷರವರೆಗೆ ದೂರುತಂದರು. ಅನಂತರ ಹಲವು ಪ್ರಶ್ನೆಗಳಿಗೆ ಮಾ॥ ಸಿದ್ದಯ್ಯನವರು ಉತ್ತರಿಸುತ್ತಾರು.

ಪ್ರಶ್ನೋತ್ತರ ಕಾಲ ಮುಗಿಯಿತು

'1-5 ಗಂಟೆ; ಪ್ರಶ್ನೋತ್ತರ ಕಾಲ ಮುಗಿಯಿತು' ಎಂಬುದಾಗಿ ಶ್ರೀ ಶಾಮಯ್ಯಂಗಾರರು ಕ್ರಿಯಾಲೋಪವನ್ನು ತೆಗೆದರು. ಮಾ॥ ಪುಲ್ಲಾರೆಡ್ಡಿಯವರು ಅದಕ್ಕಾಗಿ ವಂದಿಸಿದರು.

ಹಳೇ ರೋಗಕ್ಕೆ ಔಷಧಿ ಕೊಡಿ

ಕಾಂಗ್ರೆಸ್ ಪಕ್ಷದ ಶ್ರೀ ಕೃಷ್ಣಮೂರ್ತಿ ಮತ್ತಿತರು ಕಳೆದ ದಿನಸ ಮಂಡಿಸಿದ್ದ ಪ್ರಿವಿಲೇಜ್ ಮೋಷನ್ನನ್ನು ಶ್ರೀ ಲಿಸಿ ಉತ್ತರ ಕೊಡಬೇಕೆಂದು ಕೆಳಿದ್ದನ್ನು ಶ್ರೀ ಗುಪ್ತರು ಕೇಳಿದರು. ಶ್ರೀ ಗುಪ್ತರು ಮಾತನಾಡುತ್ತಿದ್ದಾಗ ಶ್ರೀ ನಂಜುಂಡರಾಯ ಕ್ರಿಯಾಲೋಪವಿದೆ ಹೇಳಬಯಿಸುತ್ತೇನೆ ಎಂಬುದಾಗಿ ಎಬ್ಬರಿಸಿ ನಿಂತರು. ಮತ್ತೊಬ್ಬ ಸದಸ್ಯರು ಇಬ್ಬರು ಸದಸ್ಯರು ಒಟ್ಟಿಗೆ ನಿಂತಿರುವುದು ತಪ್ಪೆಂದು ಕ್ರಿಯಾಲೋಪವನ್ನು ತಂದರು 'ಸಿಲ್ಲುವವರ ಸಂಖ್ಯೆ ಹೆಚ್ಚಬಹುದೆಂದು ಭಯವಾಗಿದೆ' ಎಂದರು ಅಧ್ಯಕ್ಷರು. ಸಭೆಯಲ್ಲಿ ನಗೆಯು ನರ್ತನ ಮಾಡಿತು.

ಅಧ್ಯಕ್ಷರ ಸಮಾಧಾನ

'ತುರ್ತಾದ ಕಾರ್ಯವಿದ್ದಾಗ ಸಭೆಯನ್ನು ಮುಕ್ತಾಯಗೊಳಿಸ ಬೇಕೆಂದು ಕೋರಿದರೆ ಅದು ನಡೆಸಲ್ಪಡದಿರಬಹುದು. ಈ ರೀತಿ ಕೇಂದ್ರ ಸಭೆಗಳಲ್ಲಿ ನಡೆದಿದೆ' ಎಂಬುದಾಗಿ ಅಧ್ಯಕ್ಷರು ತಿಳಿಸಿದರು.

ಠರಾವು ನಿರಾಕರಿಸಲ್ಪಟ್ಟಿತು

ಶ್ರೀ ಜೋಯಿಸ್ ಮತ್ತು ಶ್ರೀ ಶಾಮರಾಜಯ್ಯಂಗಾರರಿಂದ ರಾಜಧಾನಿ ಸಿಯಲ್ಲಿಸ ಪ್ರತಿಬಂಧಕಾಜ್ಞೆ ಬಗ್ಗೆ ಮಂಡಿಸಲ್ಪಟ್ಟಿದ್ದ ಠರಾವು ನಿರಾಕರಿಸಲ್ಪಟ್ಟಿತು.

ಮಸೂದಾ ಕಾನೂನುಗಳು

ಸಂಸ್ಥಾನ ಜೀವವಿಮೆ ತಿದ್ದುಪಡಿ ಕಾನೂನು ಅಂಗೀಕಾರವಾಯಿತು

ಮೈಸೂರು ವರಮಾನ ತೆರಿಗೆ ಮೇಲೆ ವಿಪರೀತ ಚರ್ಚೆಯಾಗಿ 110-80 ಮತಗಳಿಂದ ಪರಾಜಯವಾಯಿತು.

(ಹಿಂದಿನ ಪುಟದಿಂದ ಮುಂದುವರಿದುದು)

ಮಸೂದಾ ಕಾನೂನುಗಳು

ಮೋಟಾರು ವಾಹನದ ತಿದ್ದುಪಡಿ ಮಸೂದೆಯ ಪರವಾಗಿ ಶ್ರೀ ಪಾವುಗಡ ನಂಜುಂಡರಾಯರು ಮಾತಾಡಿದರು. ಕಾಂಗ್ರೆಸ್ ಮತ್ತು ಭೂಪಾಳಂ ಇವನ್ನು ವಿರೋಧಿಸಿದರು. ಈ ಮಸೂದೆ ಅಧಿಕ ಮತದಿಂದ ಅಂಗೀಕೃತವಾಯಿತು.

ಸರ್ಕಾರದ ಮೇಲಿನ ಕೋರ್ಟ್ ವ್ಯವಹಾರ ಕಾಂಗ್ರೆಸ್ ಪಕ್ಷದಿಂದ ವಿರೋಧಿಸಲ್ಪಟ್ಟು, ಬಹುಮತಾಂಗಿಕೃತವಾಯಿತು.

ಅಧಿಕಲಾಭ ತೆರಿಗೆ ಮಸೂದೆಗೆ 80-133 ಮತಗಳಿಂದ ಅಸಜಯವಾಯಿತು.

ಮೈಸೂರು ಜೀವವಿಮೆ ಇಲಾಖೆ ತಿದ್ದುಪಡಿ ಮಸೂದೆ ಮೇಲೆ ಚರ್ಚೆಯು ಪ್ರಾರಂಭವಾಗಿದೆ.

ಜಾವಾದಲ್ಲಿ ಸಾಮೂಹಿಕ ಚಳವಳಿ

—ಜಾವಾದಲ್ಲಿ ಸಾಮೂಹಿಕ ಚಳವಳಿ ಪ್ರಾರಂಭವಾಗಿದೆ. ದೇಶಭಕ್ತರು ಬಟವಿಯಾ ಬಿಟ್ಟು ದ್ವೀಪವನ್ನೆಲ್ಲಾ ಆಕ್ರಮಿಸಿರುವರು.

o o

—ಪಂ ॥ ನೆಹರೂರವರು ಜಾವಾಕ್ಕೆ ಹೋಗಲು ವಾಹನ ಸೌಕರ್ಯಕ್ಕಾಗಿ ಭಾರತ ಸರಕಾರವನ್ನು ಕೇಳಿರುವರು.

o o

ಶ್ರೀ ಜವಹರಲಾಲರ 'ಲೆಟರ್ಸ್ ಆಫ್ ಎ ಫಾದರ್ ಟು ಹಿಸ್ ಡಾಟರ್' ಎಂಬ ಪುಸ್ತಕವನ್ನು ಶಾಲಾ ಪಠ್ಯ ಪುಸ್ತಕವಾಗಿಡಬಹುದೆಂದು ಮದರಾಸು ಸಮಿತಿಯವರು ತೀರ್ಮಾನಿಸಿದಾರೆ.

o o

—ಇಂದೂರಿನ ರಾಜಕೀಯ ಖೈದಿ ಶ್ರೀ ಶಂಟು ದಯಾಳರು 77 ದಿವಸಗಳಿಂದ ನಿರಶನ ವ್ರತವನ್ನಾಚರಿಸುತ್ತಿರುವರು. ಸ್ಥಿತಿ ಚಿಂತಾಜನಕವಾಗಿದೆ.

o o

—ಬ್ರಿಟನ್ ಮತ್ತು ಈಜಿಪ್ಟಿಗೆ 1936 ರಲ್ಲಾಗಿರುವ ಒಪ್ಪಂದದಂತೆ, ಅಣುಬಾಂಬಿನ ರಹಸ್ಯವನ್ನು ಈಜಿಪ್ಟಿಗೂ ತಿಳಿಸಬೇಕೆಂದು ಅಲ್ಲಿಯ ಮಾಜಿ ಮಂತ್ರಿಗಳೊಬ್ಬರ ಅಭಿವಾಂಛೆಯು.

AT Opera—

From 10-10-45

ರಂಜಕ್, ಟಿ ಆರ್, ರಾಜಕುಮಾರಿ

ಕೆ. ಎಲ್. ವಿ. ವಸಂತ,

ಕೃಷ್ಣ, ಮಧುರಂ ಪಾತ್ರವಹಿಸಿರುವ

ಶಾಲಿವಾಹನ

(ತಮಿಳು)

Morning Shows

From 11-10-45

Tarzan Triumphs

ನ್ಯೂ ಕೃಷ್ಣಾ ಟಾಕೀಸ್

ಮಾರ್ನಿಂಗ್ ಷೋ

ತಾ 11—10—45 ರಿಂದ

"ಬಾಳಾಜಿ"

—ಅಥವಾ—

ತಿರುಪತಿ ವೆಂಕಟೇಶ ಮಹಾತ್ಮೆ

No. R-1-60/45-46

ಮೈಸೂರು ಸಿಟಿ ರೇಷನಿಂಗ್

ಮೈಸೂರು ಸಿಟಿಯಲ್ಲಿರುವ ಎಲ್ಲಾ ಸರ್ಕಾರಿ ಡಿಪೋಗಳೂ, ಮೊಪಲ್ಲಾ ಸಬ್ ಗೋಡೌನುಗಳೂ ಮತ್ತು ಇತರೇ ರೇಷನ್ ಡಿಪೋಗಳೂ ಸಹ ಇದೇ ಅಕ್ಟೋಬರ್ ಮಾಹೆ 15 ನೇ ತಾರೀಖು ಸೋಮವಾರ ಮತ್ತು 16 ನೇ ತಾರೀಖು ಮಂಗಳವಾರ ಮಧ್ಯಾಹ್ನ ಮಾತ್ರ 'ಮಹಾನವಮಿ' ಮತ್ತು 'ವಿಜಯದಶಮಿ' ಪ್ರಯುಕ್ತ ಮುಚ್ಚಲ್ಪಡುತ್ತವೆ

ದಸರಾ ಕಾಲದಲ್ಲಿ ಮಂಗಳವಾರ ಬೆಳಿಗ್ಗೆ ಮತ್ತು ಗುರುವಾರ ಮಧ್ಯಾಹ್ನ ಎಲ್ಲಾ ಡಿಪೋಗಳಿಗೂ ಇದ್ದ ನಮ್ಮ ಮೂಲು ರಜವನ್ನು ನಿಲ್ಲಿಸಿರುತ್ತೆ.

(ಸಹಿ) ಟಿ. ವಿ. ರೆಡ್ಡಿ

4—10—45 ರೇಷನಿಂಗ್ ಆಫೀಸರ್

ಮೈಸೂರು ಸಿಟಿ

Edited, Printed and published by M. S. Krishna Rao, at the Satvavadi Press, Chamaraja Agrahar, Mysore

ಪ್ರಜಾಪ್ರತಿನಿಧಿಸಭೆಯ ಕಾರ್ಯಕಲಾಪಗಳು

ಮೈಸೂರು, ಅ 11 — ಪ್ರಜಾ ಪ್ರತಿನಿಧಿ ಸಭೆಯ ದಸರಾ ಸಮಾನೇ ಕದ ದ್ವಿತೀಯ ದಿನಸದ ಕಾರ್ಯಕ್ರಮಗಳು 12 ಗಂಟೆಗೆ ಪ್ರಧಾನ ತಿರೋಮನೆ ನ್ಯಾಯಮತಿ ಮಾಧವರಾಯರ ಅಧ್ಯಕ್ಷತೆಯಲ್ಲಿ, ಪ್ರಶ್ನೋತ್ತರ ಕಾರ್ಯಕ್ರಮಗಳಿಂದ ಬೆಳೆಯಿತು.

ಅತಿಥಿಗಳ ಪೀಠದಲ್ಲಿ ಶಾಸನ ಸಭಾಧ್ಯಕ್ಷರಾದ ರಾಜಮಂತ್ರ ಪ್ರವೀಣ ಹೆಚ್. ಬಿ. ಗುಂಡಪ್ಪಗೌಡರು ಮಂಡಿಸಿದ್ದರು.

ಮಾಜೀ ಶಾಸನ ಸಭಾಧ್ಯಕ್ಷರಾದ ಶ್ರೀ ಡಿ. ಹೆಚ್. ಚಂದ್ರಶೇಖರಯ್ಯ ನವರು ಸಭೆಯಲ್ಲಿ ಭಾಗವಹಿಸಿದ್ದರು.

ಪ್ರಶ್ನೋತ್ತರಗಳು.

ಶ್ರೀ ಎಸ್. ಸೂರ್ ಹುಸೇನ್‌ರವರು ಕೋರಿದ್ದ ಉತ್ತರಗಳಿಗೆ, ಶ್ರೀ ಮಲ್ಲಾರಾಧ್ಯರು ಉತ್ತರಕೊಡುತ್ತಾ ' ಮೈಸೂರಿನಲ್ಲಿರುವ ಮಹಾರಾಣಿ ಕಾಲೇಜ್ಯು ಫುಲ್‌ಗ್ರೇಡ್' ನ ಹಿಳಾ ಕಾಲೇಜ್ ಅಗುವಂತೆ ಸರ್ಕಾರ ತೀರ್ಮಾನಿಸಿಲ್ಲ. ಈ ತೀರ್ಮಾನವು ಸರ್ಕಾರದ ಮನಸ್ಸಿನಲ್ಲಿ ಇಲ್ಲದಿರುವುದರಿಂದ ಕಟ್ಟಡ ಅನುಕೂಲತೆ, ಉಪಾಧ್ಯಾಯಿರುಗಳ ಅರ್ಹತೆ, ಮುಂತಾದವುಗಳನ್ನು ಗಮನಿಸಿಲ್ಲ ' ಎಂದರು

ಉಪ ಪ್ರಶ್ನೆಗಳು

ಪ್ರ ವಿಶ್ವವಿದ್ಯಾನಿಲಯ-ವೇನಾದರೂ ಮಹಾರಾಣಿ ಕಾಲೇಜನ್ನು ಫುಲ್ ಗ್ರೇಡ್' ಕಾಲೇಜನ್ನಾಗಿ ಪರಿವರ್ತಿಸಲು ಇಚ್ಛೆಯನ್ನೇನಾದರೂ ಪಟ್ಟಿದೆಯೇ ? ಉ ಹೇಳಲು ಸಾಧ್ಯವಿಲ್ಲ. ಪ್ರ ಸೆನೆಟ್‌ನಿಂದ ಕೇಳಿಕೆಯೇನಾದರೂ ಬಂದಿದೆಯೇ? ಉ ಹೇಳಲು ಸಾಧ್ಯವಿಲ್ಲ. ವಿದ್ಯಾರ್ಥಿನಿಯರೇನಾದರೂ ಧಿಕ ಸಂಖ್ಯಾತರಾದರೆ ಸರ್ಕಾರವು ಫುಲ್‌ಗ್ರೇಡ್' ಕಾಲೇಜನ್ನು ಕೊಡುವುದೇ ? ಉ ಭಾಷೆ ಕೊಡಲು ಸಾಧ್ಯವಿಲ್ಲ. ಪ್ರ ಹಾಸ್ಟಲ್ ಪ್ರಯೋಜನವು ಅಸ ವರ್ಶಕವಾಗಿರುವುದು ಗಮನಿಸಲ್ಪಟ್ಟಿದೆಯೇ? ಉ ಈ ಪ್ರಶ್ನೆ ಹುಟ್ಟವುದಿಲ್ಲ

ಶ್ರೀನಿವಾಸ ಎಂ.ಬಿ. ಮಹದೇವಪ್ಪನವರ ಪ್ರಶ್ನೆಗಳಿಗೆ ಶ್ರೀ ಮಲ್ಲಾರಾಧ್ಯ ಉತ್ತರಕೊಡುತ್ತಾ ನಿರ್ಬಂಧಕ ಪ್ರಾಥಮಿಕ ವಿದ್ಯಾಭ್ಯಾಸವನ್ನು ಸಾರ್ವತ್ರಿಕವಾಗಿ ಕೂಡಲೇ ಜಾರಿಗೆ ತರಬೇಕೆಂಬ ಉದ್ದಿಶ್ಯ ಸರ್ಕಾರದ ಗಮನದಲ್ಲಿಲ್ಲ. ಈ ಬಗ್ಗೆ ಯಾವ ಯೋಜನೆಯೂ ಇಲ್ಲ. ಇದಕ್ಕಾಗಿ ಹಣದ ವಿಂಜೂರಾತಿಯಾಗಿಲ್ಲ ' ಎಂಬುದಾಗಿ ತಿಳಿಸಿದರು.

ಉಪ ಪ್ರಶ್ನೆಗಳಿಗೆ ಉತ್ತರ ಕೊಡುತ್ತಾ ಶ್ರೀ ಮಲ್ಲಾರಾಧ್ಯರು ' ಆರ್ಥಿಕ ಮತ್ತು ವ್ಯವಹಾರ ತೊಂದರೆಯಿಂದ ಈ ಯೋಜನೆಯನ್ನು ಮಾಡಿಲ್ಲ. ಇದೇ ಉದ್ದೇಶದಿಂದ ಕೂಡಿದ ಬೇರೆ ಏರ್ಪಾಡನ್ನು ಸರ್ಕಾರ ಮಾಡಿದೆ ಪ್ರತಿ ವರ್ಷವೂ 300-400 ಶಾಲೆಗಳವರೆಗೆ ತೆರೆಯಲಾಗುತ್ತಿದೆ. ಇದುವರೆಗೆ 1600 ಶಾಲೆಗಳನ್ನು ತೆರೆಯಲಾಗಿದೆ. ಪ್ರತಿಯೊಬ್ಬ ವಿದ್ಯಾರ್ಥಿಯೂ ನಾಲ್ಕು ವರ್ಷಗಳ ಕಾಲ ವಿದ್ಯಾಭ್ಯಾಸ ಮಾಡಲೇ ಬೇಕೆಂದು 1942 ರಿಂದ ಜಾರಿಮಾಡಲಾಗಿದೆ ವಿದ್ಯಾಭ್ಯಾಸದಲ್ಲಿ ಏನಾದರೂ ವಿದ್ಯಾಭ್ಯಾಸ ನಿಂತರೆ ತಂದೆತಾಯಿಗಳಿಗೆ ಜುಲ್ಮಾನೆಹಾಕಲಾಗುವುದು. ಇದನ್ನು ಹತ್ತು ವರ್ಷದ ಯೋಜನೆಯಲ್ಲಿ ನಿರೂಪಿಸಿದೆ ' ಎಂದು ಹೇಳಿದರು.

ಗೋಮಟೇಶ್ವರ ವಿಗ್ರಹವನ್ನು ಕುರಿತು ಶ್ರೀ ಮಲ್ಲಾರಾಧ್ಯರು ಉತ್ತರಕೊಡುತ್ತಾ ' ಗೋಮಟೇಶ್ವರ ವಿಗ್ರಹದ ರಕ್ಷಣೆ ಸಮಿತಿಗೆ ಒಪ್ಪಿಸಲಾಗಿದೆ. ಸಧ್ಯದಲ್ಲಿ ಅದಕ್ಕೆ ಅಪಾಯವೇನೂ ಆಗಲಾರದು. ಕೇಂದ್ರ ಸರ್ಕಾರದಿಂದ ಉತ್ತರ ಬಂದ ಕೂಡಲೇ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು. ಮುಜರಾಯಿ ಕಮಿಷನರು ಈ ಸಮಿತಿ ಅಧ್ಯಕ್ಷರು '

ಅವಸರದ ಪರಾವು

ನಾಳೆಯ ದಿವಸ ಚಿತ್ರದುರ್ಗ, ಚನ್ನಗಿರಿ ಆಹಾರ ಸಮಸ್ಯೆಯನ್ನು ಕುರಿತು ಚರ್ಚಿಸಲಾಗುವುದು.

ಮೈಸೂರು ಸಿಟಿ ಮುನಿಸಿಪಾಲಿಟಿ

ಸಿಟಿ ಮಾರ್ಕೆಟ್
ಪ್ರದರ್ಶನ

ತಾ 13-10-1945

ಶನಿವಾರ ಬೆಳಿಗ್ಗೆ 8-30 ಘಂಟೆಯಿಂದ 12 ಘಂಟೆಯವರಿಗೆ ದೇವರಾಜ ಮಾರ್ಕೆಟ್ಟಿನಲ್ಲಿ ನಡೆಯುವುದು.

ಪ್ರವೇಶ : ಟಿಕೀಟು ಮೂಲಕ

0-2-0

ಉತ್ತಮ ಪ್ರದರ್ಶನಗಳಿಗೆ
ಒಳ್ಳೆಯ ಬಹುಮಾನಗಳು.

ವಿವರಗಳನ್ನು ಮುನಿಸಿಪಲ್ ಆಫೀಸಿನಲ್ಲಿಯೂ, ದೇವರಾಜ ಮಾರ್ಕೆಟ್ ಆಫೀಸಿನಲ್ಲಿಯೂ ತಿಳಿಯಬಹುದು.

(ಸಹಿ) ಆರ್. ರಾಮಚಂದ್ರರಾವ್
ಬಾಂಭೋರೆ,
ಪ್ರೆಸಿಡೆಂಟ್.

ಸತ್ಯವಾದಿ
ದಿನ ಪತ್ರಿಕೆ

ಸ್ಥಳದಲ್ಲಿ — ತಿಂಗಳಿಗೆ 6 ಆಣೆ

ಸತ್ಯವಾದಿ ಸೋಮವಾರದ ಸಂಚಿಕೆಗೆ ಎಲ್ಲಾ ಊರುಗಳಲ್ಲೂ ಏಜಂಟರು ಬೇಕಾಗಿದ್ದಾರೆ. ವಿಷಯಗಳಿಗೆ ಬರೆಯಿರಿ. ಅಂಚೆ ವೆಚ್ಚ ಸೇರಿ ಪರಸ್ಥಳಕ್ಕೆ 1-12-0

ಆ ಮ ಶ ಂ ಕೆ
ಅ ತಿ ಸಾ ರ ಗ ಳಿ ಗೆ
.... ಖಾತ್ರಿ ....
ಗು ಣ ಕಾ ರಿಯಾ ದ
ಡಿಸೆಂಟಿಸೆಡ್
ಲ
ಎಲ್ಲಾ ಕಡೆಗಳಲ್ಲಿಯೂ ದೊರೆಯುತ್ತೆ.
— ಸ್ಟಾಕಿಸ್ಟರು —
ರಘುಲಾಲ್ ಅಂಡ್ ಕೊ.
ಟಿ. ಸಿ. ನಟರಾಜ್ ಅಂಡ್ ಕೊ.
— ಹಂಚುವವರು —
ಕಾಂತರಾಜ್ ಅಂಡ್ ಕೊ.
ರವೇ ಬೀದಿ, ಮೈಸೂರು.

At Ranjit
Humayun
5 ನೇ ವಾರ
ರಣಜಿತ್ ಟಾಕೀಸಿನಲ್ಲಿ
.... ಹುಮಾಯೂರ್....
(ಹಿಂದಿ)
ಅಶೋಕ ಕುಮಾರ್, ಚಂದ್ರಮೋಹನ್
ವೀಣಾ, ನರ್ಗಿಸ್,, ಷಾ ನವಾಸ್
ಪಾತ್ರ ವಹಿಸಿರುವರು

ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್‌ಬೋರ್ಡ್,
ಮೈಸೂರು.

ಹರಾಜು ನೋಟೀಸ್

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ : —

ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್‌ಬೋರ್ಡಿಗೆ ಸೇರಿದ ಕೆಲವು ಅತ್ಯುತ್ತಮವಾದ ಬಂಗ್ಲಾ ಸೈಟುಗಳನ್ನು ತಾರೀಖು 12-9-1945 ನೇ ಹರಾಜು ಇಸ್ತಿಹಾರ್‌ನಾಮೆಯ ಷರತ್ತು ಪ್ರಕಾರ ತಾರೀಖು 20-10-1945 ರಿಂದ 23-10-1945 ರ ವರೆಗೆ ಸೈಟುಗಳ ಬಳಿ ಬಹಿರಂಗವಾಗಿ ಹರಾಜು ಮಾಡಲಾಗುತ್ತೆ. ವಿವರಗಳನ್ನು ಆಫೀಸಿನಲ್ಲಿ ತಿಳಿಯಬಹುದು.

(ಸಹಿ) ಆರ್. ರಾಮಚಂದ್ರರಾವ್ ಬಾಂಭೋರೆ
ಛೇರ್ಮನ್